ಆ) ಕುಂದಾಪುರ ವಿಧಾನ ಸಭಾ ವ್ಯಾಪ್ತಿಯಲ್ಲಿ ಗುರುತಿಸಲಾದ ಫಲಾನುಭವಿಗಳೆಷ್ಟು;

ಇ) ಗುರುತಿಸಲಾದ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ನೀಡಲಾಗಿದೆಯೇ;

ಈ) ನೀಡಿದ್ದಲ್ಲಿ, ಕುಂದಾಪುರ ಕ್ಷೇತ್ರದಲ್ಲಿ ಎಷ್ಟು ಮಂದಿಗೆ ನೀಡಲಾಗಿದೆ;

ಉ) ಉಳಿದವರಿಗೆ ಯಾವಾಗ ನೀಡಲಾಗುವುದು;

ಊ) ಬಿಪಿಎಲ್ ಪಟ್ಟಿಯಲ್ಲಿ, ಗುರುತಿಸಲು ಬಿಟ್ಟು ಹೋದವರನ್ನು ಗುರುತಿಸಿ, ಅವರಿಗೆ ಪಡಿತರ ಚೀಟಿ ಕೊಡಲು ಕ್ರಮ ಕೈಗೊಳ್ಳಲಾಗುವುದೇ;

ಋ) ಹಾಗಿದ್ದಲ್ಲಿ, ಎಂದಿನಿಂದ ಈ ಕ್ರಮವನ್ನು ಅನುಸರಿಸಲಾಗುವುದು;

ಋೂ) ಪಡಿತರ ಚೀಟಿ ವಿತರಿಸಿದ ಫಲಾನುಭವಿಗಳಿಗೆ ಯಾವಾಗಿನಿಂದ ಪಡಿತರ ಧಾನ್ಯಗಳನ್ನು ನೀಡಲಾಗುವುದು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು)

ಅ) ಕುಂದಾಪುರ ತಾಲ್ಲೂಕಿನಲ್ಲಿ ದಿನಾಂಕ 11–1–2005ಕ್ಕೆ ಬಿಪಿಎಲ್ ಅಡಿಯಲ್ಲಿ 37138 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ) ಕುಂದಾಪುರ ವಿಧಾನ ಸಭಾ ವ್ಯಾಪ್ತಿಯಲ್ಲಿ 17150 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಇ) ವಿತರಿಸಲಾಗಿದೆ.

ಈ) ಕುಂದಾಪುರ ಕ್ಷೇತ್ರದಲ್ಲಿ 17150 ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಮನೆ–ಮನೆ ಪುನರ್ ಸಮೀಕ್ಷೆ ಕಾರ್ಯವು ಜನವರಿ, 2005ರಿಂದ ಪ್ರಾರಂಭವಾಗಿದ್ದು, ಏಪ್ರಿಲ್, 2005ಕ್ಕೆ ಮುಗಿಯಲಿದೆ. ಸಮೀಕ್ಷೆಯ ನಂತರ ಎಲ್ಲಾ ಅರ್ಹ ಬಿಪಿಎಲ್ ಕುಟುಂಬಗಳಿಗೂ ಪಡಿತರ ಚೀಟಿಗಳನ್ನು ನೀಡಲಾಗುವುದು.

ಋ) ಜನವರಿ, 2005ರಿಂದ ಸಮೀಕ್ಷೆ ಕಾರ್ಯ ಪ್ರಾರಂಭಗೊಂಡಿರುತ್ತದೆ. ಏಪ್ರಿಲ್, 2005ರ ನಂತರ ಅರ್ಹ ಕುಟುಂಬಗಳಿಗೆ ಹಳದಿ ಕಾರ್ಡುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಋೂ) ಪಡಿತರ ಚೀಟಿ ವಿತರಿಸಿದ ಮಾಹೆಯಿಂದಲೇ ಆಹಾರ ಧಾನ್ಯಗಳನ್ನು ವಿತರಿಸಲಾಗುವುದು.

535(349) ಶ್ರೀ ಹೇ ಹಾಲಪ್ಪ (ಹೊಸನಗರ) ಮಾನ್ಯ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹೊಸನಗರ ಮತ್ತು ಶಿವಮೊಗ್ಗ ತಾಲ್ಲೂಕಿನಲ್ಲಿರುವ ಜನರಿಗೆ ಒದಗಿಸಿರುವ ಪಡಿತರ ಚೀಟಿ ಎಷ್ಟು ಹಾಗೂ ಬೇಡಿಕೆ ಎಷ್ಟು;

ಆ) ಇದರಲ್ಲಿ, ಎಷ್ಟು ಜನರಿಗೆ ವಿತರಿಸಲಾಗಿದೆ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು)

ಅ) ಶಿವಮೊಗ್ಗ ಹಾಗೂ ಹೊಸನಗರ ತಾಲ್ಲೂಕುಗಳಿಗೆ ಒದಗಿಸಿರುವ ಪಡಿತರ ಚೀಟಿಗಳ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ವಿವಿಧ ತರದ ವ.ಚೀ.	ತಾಲ್ಲೂಕಿನ ಹೆಸರು ಶಿವಮೊಗ್ಗ	ಹೊಸನಗರ
1.	ಹಳದಿ ಪಡಿತರ ಚೀಟಿಗಳು	33336	15047
2.	ಅಂತ್ಯೋದಯ ಪ.ಚೀ.ಗಳು	3126	2224
3.	ಎಪಿಎಲ್ ಪ.ಚೀ. (ಕೇಸರಿ)	22204	8599
	ಒಟ್ಟು	**48666**	**25870**

ಅರ್ಹ ಫಲಾನುಭವಿಗಳು ಕೈಬಿಟ್ಟು ಹೋಗಿವೆ. ಅನರ್ಹ ಕುಟುಂಬಗಳ ಪಟ್ಟಿ ಸೇರ್ಪಟ್ಟಿವೆ ಎಂದು ಸರ್ಕಾರದ ಗಮನಕ್ಕೆ ಬಂದಿದ್ದರ ಕಾರಣ ವಿವಿಧ ಇಲಾಖೆಯ ಅಧಿಕಾರಿಗಳು / ನೌಕರರನ್ನು ಒಳಗೂಡಿಸಿ, ಜನಪ್ರತಿನಿಧಿಗಳು ಸ್ತ್ರೀಶಕ್ತಿ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೂಡಿಸಿಕೊಂಡು ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ ಮಾಡಲ ಸರ್ಕಾರದ ಸಂ. ಅನಾಸ 114 ಡಿಆರ್‌ಎ 04 ದಿನಾಂಕ 10–1–05ರಂದು ಆದೇಶ ಹೊರಡಿಸಿದೆ. ಈ ಆದೇಶದಂತೆ ಪುನರ್ ಸಮೀಕ್ಷೆ ಪ್ರಾರಂಭವಾಗಿದ್ದು ಸಮೀಕ್ಷೆಯ ಫಲಿತಾಂಶವನ್ನು ಗ್ರಾಮಸಭೆಗಳಲ್ಲಿ / ವಾರ್ಡ್ ಸಭೆಗಳಲ್ಲಿಟ್ಟು ಅನುಮೋದನೆ ಪಡೆಯುವ ನಿರೀಕ್ಷೆ ಏಪ್ರಿಲ್ 2005ರಲ್ಲಿರುತ್ತದೆ. ಬೇಡಿಕೆ ಎಷ್ಟು ಎಂಬುದನ್ನು ನಿರ್ಧರಿಸಿದ ಮೇಲೆ ಅರ್ಹರಿಗೆ ಹಳದಿ ಪಡಿತರ ಚೀಟಿ ವಿತರಿಸಲಾಗುವುದು.

ಆ) ಶಿವಮೊಗ್ಗ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ವಿತರಿಸಲಾಗಿರುವ ಪಡಿತರ ಚೀಟಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವಿಧ ತರದ ವ.ಚೀ.	ತಾಲ್ಲೂಕಿನ ಹೆಸರು ಶಿವಮೊಗ್ಗ	ಹೊಸನಗರ
1.	ಹಳದಿ ಪಡಿತರ ಚೀಟಿಗಳು	33336	15047
2.	ಅಂತ್ಯೋದಯ ಪ.ಚೀ.ಗಳು	3126	2224
3.	ಎಪಿಎಲ್ ಪ.ಚೀ. (ಕೇಸರಿ)	22204	8599
	ಒಟ್ಟು	**48666**	**25870**